ಒ.ಎಸ್. ನಂ.143/2016
ಪಿಡಬ್ಲು-3

ದಿನಾಂಕ 05.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ</u>

ನಾನು ಪಿಯುಸಿವರೆಗೆ ವ್ಯಾಸಂಗ ಮಾಡಿರುತ್ತೇನೆ. ವಾದಿ ನನ್ನ ಚಿಕ್ಕಪನಾಗಬೇಕು. ನನಗೆ ಈಗ 46-ವರ್ಷ ವಯಸ್ಸಾಗಿರುತ್ತದೆ. ತಮ್ಮಣ್ಣ ಮತ್ತು ವಾದಿಯ ನಡುವೆ ದಾವಾಸ್ತಿಯು ಖರೀದಿ ಆಗಿರುತ್ತದೆಯೆ ಎಂದರೆ ಸಾಕ್ಷಿ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ವ್ಯವಹಾರವು ಜೂನ್ 1987 ರಲ್ಲಿ ಬಿರಾಳ ಕೆ ಗ್ರಾಮದ ಒಂದು ಅಂಗಡಿಯಲ್ಲಿ ಆಗಿರುತ್ತದೆ. ಖರೀದಿ ವ್ಯವಹಾರದ ಸಮಯದಲ್ಲಿ ನನಗೆ 6-7 ವರ್ಷಗಳಾಗಿರುತ್ತದೆ. ಸಾಮಾನ್ಯವಾಗಿ 6-7 ವರ್ಷದ ಬಾಲಕರಿಗೆ ವ್ಯವಹಾರಗಳಿವೆ ಕರೆಸುವುದಿಲ್ಲ ಎಂದರೆ ಸಾಕ್ಷಿ ನಾನು ನನ್ನ ತಂದೆಯ ಜೊತೆ ಹೋಗಿದ್ದೆ ಎಂದು ಹೇಳುತ್ತಾರೆ. ತಮ್ಮಣ್ಣ ಮೃತಪಡುವವರೆಗೂ ಬಿರಾಳ ಕೆ ಗ್ರಾಮದಲ್ಲಿದ್ದ ಎಂದರೆ ಸರಿ. ಭೀಮರಾಯ ಮತ್ತು ತಮ್ಮಣ್ಣನಿಗೆ ಹುಲಿಕಲ್ ಗ್ರಾಮದಲ್ಲಿ ಸಹ ಆಸ್ತಿಗಳಿದ್ದವು ಎಂದರೆ ನನಗೆ ಗೊತ್ತಿಲ್ಲ. ಭೀಮರಾಯ ಮತ್ತು ತಮ್ಮಣ್ಣನಿಗೆ ಹುಲಿಕಲ್ ಗ್ರಾಮಕ್ಕೆ ಆಗಾಗ ಹೋಗುವುದು ಮಾಡುತ್ತಿದ್ದರು ಎಂದರೆ ಸಾಕ್ಷಿ ಭೀಮರಾಯರವರು ಮಾತ್ರ ಹೋಗುತ್ತಿದ್ದರು ಎಂದು ಹೇಳುತ್ತಾರೆ. ಭೀಮರಾಯ ಮತ್ತು ತಮ್ಮಣ್ಣರವರಿಗೆ ಆಸ್ತಿಗಳಿರುವುದರಿಂದ ಅವರ ಆರ್ಥಿಕ ಸ್ಥಿತಿ ಸರಿಯಾಗಿತ್ತು ಎಂದರೆ ಸರಿ. 7-8 ವರ್ಷಗಳ ಹಿಂದೆ ನಾನು, ಶರಣಗೌಡ, ಮಹ್ಮದ ಆರಿಫ ಎನ್ನುವವರು ಸೇರಿ 1ನೆ ಪ್ರತಿವಾದಿಗೆ ದಾವಾಸ್ತಿಯನ್ನು ಖರೀದಿ ಮಾಡಿಕೊಂಡುವಂತೆ ನಾನು ಖುದ್ದಾಗಿ ಕೇಳಿರುತ್ತೇನೆ. ಪ್ರತಿವಾದಿಯರಿಗೆ ವಾರಾಸಾ ಮಾಡಲು ಯಾವುದೆ ತಕರಾರು ನೀಡಿರುವುದಿಲ್ಲ. 2ನೆ ಪ್ರತಿವಾದಿ 1ನೆ ಪ್ರತಿವಾದಿಯ ದಾವಾಸ್ತಿಯನ್ನು ಅಡಮಾನ ಮಾಡುವ ಸಮಯದಲ್ಲಿ ನಮ್ಮ ಕುಟುಂಬದವರ ಗಮನಕ್ಕೆ ತಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 20.01.2014 ರಂದು 2ನೆ ಪ್ರತಿವಾದಿ ದಾವಾಸ್ತಿಯ ನೊಂದಾಯಿತ ಅಡಮಾನ ಮಾಡಿಕೊಂಡ ವಿಚಾರ ನಿಮ್ಮ ಕುಟುಂಬಕ್ಕೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2ನೆ ಪ್ರತಿವಾದಿ ದಾವಾಸ್ತಿಯನ್ನು ಅಡಮಾನ ಮಾಡಿಕೊಂಡಿದ್ದು ಆತನೆ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿ 2-ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು ಮೊದಲು ವಾದಿಯೆ ಸಾಗುವಳಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ದಿನಾಂಕ 26.09.2022 ರಂದು 1ನೆ ಪ್ರತಿವಾದಿಯು 2ನೆ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ವ್ಯವಹಾರವು ರೂ.10,400/- ಗಳಿಗೆ ಆಗಿರುತ್ತದೆ. ನಾನು ಖರೀದಿ ಪತ್ರಕ್ಕೆ ಸಹಿ ಮಾಡಿಲ್ಲ. ಖರೀದಿ ಪತ್ರಕ್ಕೆ ನನ್ನ ಕೈಯಾರೆ ಹಣ ನೀಡಿರುತ್ತೇನೆ

ಎಂದು ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಹೊಲ ಖರೀದಿ ಸಮಯದಲ್ಲಿ ನನಗೆ ನೋಟಿಸು ಬಂದಿಲ್ಲ. ವಾದಿ ನನ್ನ ಸಂಬಂಧಿನಾಗಿರುವುರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ 1ನೆ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ